**CC 1172/2023. PW-1.**

ಮಧ್ಯಂತರ ಅರ್ಜಿ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕಃ **12-09-2023** ರಂದು ಕರೆಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ: ವಿ.ಯು. ವಕೀಲರಿಂದ:

| | |
|---|---|
| ನಿ.ಪಿ.7 | ಎಚ್.ಪಿ. ಲೋನ್ ಅಗ್ರಿಮೆಂಟ್ |
| ನಿ.ಪಿ.7(ಎ) | ಆರೋಪಿ ಸಹಿ |
| ನಿ.ಪಿ.8 | B-Extract |

ಎಂದು ಗುರ್ತಿಸಲಾಯಿತು.

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

(ಅಬ್ದುಲ್ ಖಾದರ್)
ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು, ಬೀದರ.

<u>ಸಾಕ್ಷಿಯನ್ನು ಇಂದು ದಿನಾಂಕಃ **06-10-2023** ರಂದು ಕರೆಸಿ, ಪ್ರಮಾಣ ವಚನ ಬೋಧಿಸಲಾಯಿತು.</u>
<u>ಪಾಟೀ ಸವಾಲುಃ ಆರೋಪಿ ಪರ: ಶ್ರೀ : ಜಹಾಂಗೀರ ವಕೀಲರರಿಂದ.</u>

2. ಸಾಲ ಕೊಡುವಾಗ ಟಾಟಾ Ace ನ ಮೌಲ್ಯ ಒಂದು ಲಕ್ಷವಿತ್ತು. ಆರೋಪಿಗೆ ನಾನು ರೂ.80 ಸಾವಿರ ಸಾಲ ಕೊಟ್ಟಿದ್ದೇನೆ. ಆರೋಪಿ ನನ್ನ ಫೈನಾನ್ಸ್‌ಗೆ ರೂ.37,000/- ಮರು ಪಾವತಿ ಮಾಡಿದ್ದಾರೆ, ಆ ಸಂಬಂಧ ರಸೀದಿ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ವಾಹನವನ್ನು ನಾವು ಸೀಜ್ ಮಾಡಿದ್ದೇವೆ ಎಂದರೆ ಸರಿ. ಸಾಲ ಕೊಟ್ಟ 16 ತಿಂಗಳ ನಂತರ ವಾಹನವನ್ನು ಸೀಜ್ ಮಾಡಿದ್ದೇವೆ. ಸಾಲ ಮರು ಪಾವತಿ ಮಾಡಲು 24 ತಿಂಗಳ ಇ.ಎಂ.ಐ ಕಂತು ಕೊಟ್ಟಿದ್ದೇವು, 8 ಇ.ಎಂ.ಐ ಆರೋಪಿ ಕಟ್ಟಿದ್ದಾನೆ. 3 ತಿಂಗಳ ಇ.ಎಂ.ಐ ಉಳಿಸಿಕೊಂಡಿದ್ದಲ್ಲಿ ವಾಹನ್ ಸೀಜ್ ಮಾಡುತ್ತೇವೆ. 3 ತಿಂಗಳ ನಂತರ ಆರೋಪಿಗೆ ನೋಟಿಸ್ ಕೊಟ್ಟಿದ್ದೀರಾ ಎಂದರೆ ಇಲ್ಲ.

3. ವಾಹನವನ್ನು ನಾನು ರೂ.45 ಸಾವಿರಕ್ಕೆ ಮಾರಾಟ ಮಾಡಿದ್ದೇನೆ. ಆರೋಪಿಯಿಂದ ಅನುಮತಿ ಪಡೆಯದೇ ಮಾರಾಟ ಮಾಡಿದ್ದೆ, ಆ ಸಂಬಂಧ ದಾಖಲೆ ಇದೆಯೇ ಎಂದರೆ ಇಲ್ಲ. ಹರಾಜಿನಲ್ಲಿ ವಾಹನವನ್ನು ಯಾರೂ ಪಡೆದಿದ್ದಾರೆ, ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೇನೆಂದು ದೂರಿನಲ್ಲಿ ನಮೂದಿಸಿದ್ದೀರಾ ಎಂದರೆ ಇಲ್ಲ. ಆರ್.ಟಿ.ಓ ನಿಂದ ವಾಹನದ ಮಾರುಕಟ್ಟೆ ಬೆಲೆಯನ್ನು ನಿಗದೀ ಪಡಿಸಿದ್ದೀರಾ ಎಂದರೆ ಇಲ್ಲ. 16 ತಿಂಗಳ ನಂತರ ವಾಹನ ಸೀಜ್ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಚೆಕ್ ನ್ನು ಸಾಲ ಪಡೆಯುವ ಪೂರ್ವ ಪಡೆದಿದ್ದೀರಾ ಎಂದರೆ ಇಲ್ಲ. ಆರೋಪಿಯೇ ಚೆಕ್ ನ್ನು ಕೊಟ್ಟಿದ್ದರು, ಯಾರೂ ಬರವಣಿಗೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ಕಂತನ್ನು ಸರಿಯಾಗಿ ಪಾವತಿ ಮಾಡಿದ್ದರೂ ಒಂದು ಕಂತಿನ ಹಣ ಬಾಕಿ ಇದ್ದ ಕಾರಣ ವಾಹನ ಸೀಜ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕೊಟ್ಟ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸೀಜ್ ಮಾಡಿದ ವಾಹನದ ಮಾರುಕಟ್ಟೆ ಬೆಲೆ ರೂ.3 ಲಕ್ಷವಿತ್ತು ಎಂದರೆ ಸರಿಯಲ್ಲ. ವಾಹನ ಮೊಡಲ್ ಮೇಲೆ ಮಾರಾಟವಾಗುತ್ತದೆ ಎಂದರೆ ಸರಿಯಲ್ಲ. ಟಾಟಾ Ace ನ ಮಾಡೆಲ್ 2009 ಇತ್ತು. ನಾನು ಯಾವುದೇ ಹರಾಜು ಮಾಡಿಲ್ಲ, ಆರೋಪಿಯಿಂದ ಹೆಚ್ಚಿನ ಹಣ ಪಡೆಯುವ ಸಂಬಂಧ ರೂ.1 ಲಕ್ಷ ಚೆಕ್ ನಲ್ಲಿ ಬರೆದು ಬ್ಯಾಂಕ್ ಗೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಹರಾಜು ಮಾಡುವ ಪೂರ್ವದಲ್ಲಿ ನೋಟಿಸ್ ನೀಡದೇ ಆರೋಪಿಯಿಂದ ಅಕ್ರಮ ಲಾಭ ಪಡೆಯಲು ಸುಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಯಾವ ಶರತ್ತಿಗೆ ಒಳಪಟ್ಟು ಆರೋಪಿಗೆ ಸಾಲ ಕೊಟ್ಟಿದ್ದೆ ಎಂದು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ.

**(ಮರು ವಿಚಾರಣೆ ಇರುವುದಿಲ್ಲ).**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

**(ಅಬ್ದುಲ್ ಖಾದರ್)**
ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು, ಬೀದರ.